IID 9/19

PW-**1**

**ಸಾಕ್ಷಿಯನ್ನು ಈ ದಿನ ದಿನಾಂಕ 23.09.2023 ರಂದು ಪುನಃ ಕರೆಸಿ ಪ್ರಮಾಣವಚನ ಬೋಧಿಸಿದೆಃ**

**ಪಾಟೀ ಸವಾಲುಃ ಶ್ರೀ ಜೆ.ಪಿ.ಎಲ್. ವಕೀಲರಿಂದಃ 2 ನೇ ಪಕ್ಷಗಾರರ ಪರಃ**

ನನ್ನನ್ನು ದಿನಾಂಕ 20.04.2012 ರಂದು ಪರೀಕ್ಷಾರ್ಥ ಅವಧಿಯ ಚಾಲಕನೆಂದು 2 ನೇ ಪಕ್ಷಗಾರರ ಸಂಸ್ಥೆಯಲ್ಲಿ ನೇಮಕ ಮಾಡಿದ್ದು ಎಂದರೆ ಸರಿ. ನನ್ನನ್ನು ಸಂಸ್ಥೆಯಲ್ಲಿ ನೇಮಕ ಮಾಡುವಾಗ 2 ನೇ ಪಕ್ಷಗಾರರ ಸಂಸ್ಥೆಯ ನಿಯಮಾವಳಿಗಳಿಗೆ ನಾನು ಬದ್ಧನಿರಬೇಕು ಎಂದು ಆದೇಶ ಇರುತ್ತದೆ ಎಂದರೆ ಸರಿ. ನನ್ನನ್ನು 2 ನೇ ಪಕ್ಷಗಾರರ ಸಂಸ್ಥೆಯಿಂದ ಕೆಲಸದಿಂದ ತೆಗೆಯುವಾಗ ನನಗೆ 2 ನೇ ಪಕ್ಷಗಾರರ ಸಂಸ್ಥೆಯು ನೋಟೀಸು ನೀಡಿರುತ್ತದೆ ಎಂದರೆ ಸರಿಯಲ್ಲ. ಈ ಕೇಸಿನಲ್ಲಿ ನ್ಯಾಯಾಲಯದಲ್ಲಿ ನಾನು ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎನ್ನುವುದು ನನಗೆ ಗೊತ್ತು. ಈ ಕೇಸಿನಲ್ಲಿ ನಾನು ನಿಶಾನೆ ಪಿ.4 ರಂತೆ 2 ನೇ ಪಕ್ಷಗಾರರು ಸಂಸ್ಥೆಯು ನನಗೆ ನೀಡಿರುವ ಅಪರಾಧ ಜ್ಞಾಪನಾ ಪತ್ರದ ನಕಲನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಸದರಿ ಅಪರಾಧ ಜ್ಞಾಪನಾ ಪತ್ರಕ್ಕೆ ನಾನು ಉತ್ತರ ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ಅಪರಾಧ ಜ್ಞಾಪನಾ ಪತ್ರಕ್ಕೆ ನಾನು ನೀಡಿರುತ್ತೇನೆ ಎನ್ನುವ ಉತ್ತರವನ್ನು ಈ ಕೇಸಿನಲ್ಲಿ ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

2) 2 ನೇ ಪಕ್ಷಗಾರರ ಸಂಸ್ಥೆಗೆ ಯಾವುದೇ ಪತ್ರವನ್ನು ನೀಡಿದರೆ ಅದನ್ನು ಸ್ವೀಕರಿಸಿದ ಬಗ್ಗೆ 2 ನೇ ಪಕ್ಷಗಾರರ ಸಂಸ್ಥೆಯು ಅವರ ಮೊಹರು ಹಾಕಿ ಸ್ವೀಕೃತಿ ನೀಡುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಶಾನೆ ಪಿ.4 ಅಪರಾಧ ಜ್ಞಾಪನಾ ಪತ್ರಕ್ಕೆ ನಾನು 2 ನೇ ಪಕ್ಷಗಾರರ ಸಂಸ್ಥೆಗೆ ನೀಡಿರುತ್ತೇನೆ ಎನ್ನುವ ಉತ್ತರದ ನಕಲು ನನ್ನಲ್ಲಿ ಇದೆ. 2 ನೇ ಪಕ್ಷಗಾರರ ಸಂಸ್ಥೆಯ ನಿಯಮಾವಳಿಯ ಪ್ರಕಾರ ನಾನು

ಕರ್ತವ್ಯದಲ್ಲಿರುವಾಗ ನನ್ನ ಸ್ವಾಧೀನದಲ್ಲಿ ಇಂತಿಷ್ಟೇ ಹಣವನ್ನು ನಾನು ಹೊಂದಿರಬೇಕು ಎನ್ನುವ ನಿಯಮ ಇದೆ ಎಂದರೆ ಸರಿ. ದಿನಾಂಕ 23.03.2018 ರಂದು ನಾನು ಕೆಎ-13-ಎಫ್-1946 ಬಸ್ಸಿನಲ್ಲಿ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ನನ್ನ ಸ್ವಾಧೀನದಲ್ಲಿ ಅನಧಿಕೃತವಾಗಿ ರೂ.4,920/- ಹಣ ಇತ್ತು ಎಂದು ತನಿಖಾಧಿಕಾರಿಯವರು 2 ನೇ ಎದುರುದಾರರ ಸಂಸ್ಥೆಗೆ ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ನನ್ನಲ್ಲಿದ್ದ ಹಣವನ್ನು 2 ನೇ ಪಕ್ಷಗಾರರ ಸಂಸ್ಥೆಯವರು ಪಡೆದುಕೊಂಡು ಈ ಬಗ್ಗೆ ನನಗೆ ನಿಶಾನೆ ಪಿ.5 ರಂತೆ ರಶೀದಿ ನೀಡಿರುತ್ತಾರೆ ಎಂದರೆ ಸರಿ, ಆದರೆ ಸದರಿ ಹಣ ಪ್ರಯಾಣಿಕರ ಹಣವಾಗಿರುತ್ತದೆ. ನಿಶಾನೆ ಪಿ.5 ರಶೀದಿಯಲ್ಲಿ ಹೇಳಿರುವ ಹಣ ಪ್ರಯಾಣಿಕರಿಗೆ ಸಂಬಂಧಪಟ್ಟ ಹಣ ಎಂದು ನಾನು ಎಲ್ಲಿಯೂ ಲಿಖಿತವಾಗಿ ಹೇಳಿಲ್ಲ ಎಂದರೆ ಸರಿಯಲ್ಲ.

3) ದಿನಾಂಕ 04.05.2018 ರಂದು 2 ನೇ ಪಕ್ಷಗಾರರ ಸಂಸ್ಥೆಯು ನನಗೆ ನಿಶಾನೆ ಪಿ.6 ರಂತೆ ಕಾರಣ ಕೇಳಿ ನೋಟೀಸು ನೀಡಿರುತ್ತಾರೆ ಎಂದರೆ ಸರಿ. ಸದರಿ ಕಾರಣ ಕೇಳಿದ ನೋಟೀಸಿಗೆ ನಾನು ನೀಡಿರುವ ನಿಶಾನೆ ಪಿ.7 ಉತ್ತರದಲ್ಲಿ ಈ ಮೇಲೆ ಹೇಳಿರುವ ರೂ.4,920/- ಯಾರಿಗೆ ಸೇರಿದ ಹಣ ಎಂದು ಸಂಬಂಧಪಟ್ಟವರ ಹೆಸರನ್ನು ನಾನು ಹೇಳಿಲ್ಲ ಎಂದರೆ ಸರಿಯಲ್ಲ. ಸದರಿ ಹಣ ಮಾದೇಶ ಎನ್ನುವವರಿಗೆ ಸೇರಿದೆ ಎಂದು ನಾನು ಹೇಳಿರುತ್ತೇನೆ. ನಿಶಾನೆ ಪಿ.7 ಉತ್ತರದಲ್ಲಿ ನಾನು ಮಾದೇಶ ಎನ್ನುವ ಹೆಸರನ್ನು ಹೇಳಿಲ್ಲ ಮತ್ತು ಸದರಿ ಹೆಸರನ್ನು ನಾನು ಈಗ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪಕ್ಷಗಾರರ ಸಂಸ್ಥೆಯು ನಡೆಸಿರುವ ತನಿಖೆಯಲ್ಲಿ ಈ ಮೇಲೆ ಹೇಳಿರುವ ಮಾದೇಶ ಎನ್ನುವ ವ್ಯಕ್ತಿಯನ್ನು ನಾನು ನನ್ನ ಪರವಾಗಿ ಸಾಕ್ಷಿಯಾಗಿ ವಿಚಾರಣೆಗೆ ಒಳಪಡಿಸಿರುತ್ತೇನೆ.

4) 2 ನೇ ಪಕ್ಷಗಾರರ ಸಂಸ್ಥೆಯಲ್ಲಿ ನನ್ನ ವಿರುದ್ಧ ವಿಚಾರಣೆ ನಡೆಸಿದ ನಂತರ ಶಿಕ್ಷೆ ವಿಧಿಸುವುದಕ್ಕಿಂತ ಪೂರ್ವದಲ್ಲಿ ನನಗೆ 2 ನೇ ಪಕ್ಷಗಾರರ ಸಂಸ್ಥೆಯು ನಿಶಾನೆ ಪಿ.11 ರಂತೆ ಕಾರಣ ಕೇಳಿ ನೋಟೀಸು ನೀಡಿರುತ್ತದೆ ಎಂದರೆ ಸರಿ. ಸದರಿ ಕಾರಣ ಕೇಳಿ ನೋಟೀಸಿಗೆ ನಾನು ನಿಶಾನೆ ಪಿ.13 ರಂತೆ ನೀಡಿರುವ ಉತ್ತರವನ್ನು ನಾನು ಸಮಂಜಸವಾಗಿ ನೀಡಿಲ್ಲ ಎನ್ನುವ ಕಾರಣಕ್ಕೆ 2 ನೇ ಪಕ್ಷಗಾರರ ಸಂಸ್ಥೆಯ ಶಿಸ್ತು ಪ್ರಾಧಿಕಾರವು ನನಗೆ ಶಿಕ್ಷೆ ವಿಧಿಸಿರುತ್ತದೆ ಎಂದರೆ ಸರಿಯಲ್ಲ. 2 ನೇ ಪಕ್ಷಗಾರರ ಸಂಸ್ಥೆಯು ನನಗೆ ದಿನಾಂಕ 01.01.2019 ರಂದು ಶಿಕ್ಷೆಯ ಆದೇಶದ ಪ್ರತಿಯನ್ನು ನೀಡಿರುತ್ತದೆ ಎಂದರೆ ಸರಿ. ಆ ಸಂದರ್ಭದಲ್ಲಿ ನಾನು 2 ನೇ ಪಕ್ಷಗಾರರ ಸಂಸ್ಥೆಯ ಕಾರ್ಮಿಕ ಸಂಘದ ಸದಸ್ಯನಾಗಿದ್ದೆ ಎಂದರೆ ಸರಿಯಲ್ಲ.

5) 2 ನೇ ಪಕ್ಷಗಾರರ ಸಂಸ್ಥೆಯು ನನಗೆ ಶಿಕ್ಷೆ ವಿಧಿಸಿದ ತಕ್ಷಣ ಆ ರೀತಿ ವಿಧಿಸಿರುವ ಶಿಕ್ಷೆಯು ಸರಿ ಇಲ್ಲವೆಂದು ಹೇಳಿ ನಾನು ಅದರ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. 2 ನೇ ಪಕ್ಷಗಾರರ ಸಂಸ್ಥೆಯ ಮೇಲ್ಮನವಿ ಪ್ರಾಧಿಕಾರಕ್ಕೆ ನಾನು ನೀಡಿರುವ ಅರ್ಜಿಯಲ್ಲಿ ನನಗೆ ಯಾವುದೇ ಅನುಕೂಲ ಆಗಿಲ್ಲ ಎಂದರೆ ಸರಿ. ನನಗೆ 2 ನೇ ಪಕ್ಷಗಾರರ ಸಂಸ್ಥೆಯು ಶಿಕ್ಷೆ ವಿಧಿಸಿದ ಸುಮಾರು 2 ವರ್ಷಗಳ ನಂತರ ನಾನು ಸದರಿ ಶಿಕ್ಷೆ ಸರಿ ಇಲ್ಲವೆಂದು ಕ್ರಮ ಕೈಗೊಂಡಿದ್ದು ಮತ್ತು ಆ ರೀತಿ ವಿಳಂಬ ಮಾಡಿ ಕ್ರಮ ಕೈಗೊಳ್ಳಲು ನಾನು ಯಾವುದೇ ಸಕಾರಣ ಹೊಂದಿಲ್ಲ ಎಂದರೆ ಸರಿಯಲ್ಲ. ನಾನು ಆ ರೀತಿ ತಡವಾಗಿ ಕ್ರಮ ಕೈಗೊಂಡಿದ್ದನ್ನು ಮನ್ನಿಸಬೇಕು ಎಂದು ಕೋರಿ ನಾನು ಎಲ್ಲಿಯೂ ಅರ್ಜಿ ನೀಡಿಲ್ಲ ಎಂದರೆ ಸರಿಯಲ್ಲ. ನಾನು 2 ನೇ ಪಕ್ಷಗಾರರ ಸಂಸ್ಥೆಯ ನಿಯಮಾವಳಿಗೆ ವಿರುದ್ಧವಾಗಿ ಅನಧಿಕೃತವಾಗಿ ನನ್ನಲ್ಲಿ ಹಣ ಇಟ್ಟುಕೊಂಡ ಕಾರಣ ನನಗೆ ಸಾಕಷ್ಟು ಕಾಲಾವಕಾಶ ನೀಡಿ ನನ್ನ ವಿರುದ್ಧ 2 ನೇ ಪಕ್ಷಗಾರರ ಸಂಸ್ಥೆಯು ಕಾನೂನು ಕ್ರಮ ಕೈಗೊಂಡಿದ್ದು ಎಂದರೆ ಸರಿಯಲ್ಲ. ನಾನು 2 ನೇ ಪಕ್ಷಗಾರರ ಸಂಸ್ಥೆಯ ನಿಯಮಗಳಿಗೆ ವಿರುದ್ಧವಾಗಿ ನಡೆದುಕೊಂಡಿದ್ದು ಸದರಿ ತಪ್ಪಿಗೆ ಸೂಕ್ತವಾದ ಶಿಕ್ಷೆಯನ್ನು 2 ನೇ ಪಕ್ಷಗಾರರ ಸಂಸ್ಥೆಯು ನನಗೆ ನೀಡಿದ್ದು

ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು**)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**